‘ನನ್ನ ದೋಣಿ ಕಡಲಿಗೆ ಇಳಿದಿಲ್ಲಾಂತ ನಾನು ಹೇಳಿದ್ದೇನಲ್ಲವೆ. ಹಾಗೇನಾದರೂ ಆದರೆ ಆ ನಷ್ಟ ನಂಗೆ ಮಾತ್ರ ಅಲ್ಲ ಮುತ್ತು ಚಾಂಡಿಗೂ...’

‘ಯಾವ ನಷ್ಟ?’ ಅಧಿಕಾರಿ ಅರ್ಥವಾಗದೆ ಪಾಂಬುವನ್ನು ಪ್ರಶ್ನಿಸಿದ.

‘ದೋಣಿ ಕಡಲಿಗೆ ಇಳಿದಿಲ್ಲವೆಂದರೆ ಆ ದಿವಸ ಮೀನು ಇಲ್ಲಾಂತರ್ಥ. ಮೀನು ಇಲ್ಲದಿದ್ದರೆ ನಮಗೆ ವ್ಯಾಪಾರ ಇಲ್ಲ. ಅದನ್ನು ಕೇಳೋದಿಕ್ಕೆ ಅವನು ಮರಳು ದಂಡೆಗೆ ಬಂದಿದ್ದ. ಕೆಲಸಗಾರರನ್ನು ವಿಚಾರಿಸುವಾಗ ಈ ವ್ಯಕ್ತಿ ಅವನ ಕಣ್ಣಿಗೆ ಬಿದ್ದಿದ್ದ’

‘ಅಂದ್ರೆ, ಮುತ್ತು ಚಾಂಡಿಗೂ ಆ ವ್ಯಕ್ತಿ ಪರಿಚಿತನೇ?’ ಇನ್ಸ್‌ಪೆಕ್ಟರ್ ನ ಚಾಣಾಕ್ಷ ಪ್ರಶ್ನೆಗೆ ಪಾಂಬುವಿನ ಮುಖ ಬಿಳಿಚಿತು. ಸಾವರಿಸಿಕೊಂಡು ತಲೆಯಲುಗಿಸಿದ.

‘ಹೌದು, ಮುತ್ತು ಚಾಂಡಿಗೂ ಆತ ಪರಿಚಿತನೆ. ನಮ್ಮ ವ್ಯವಹಾರ ವೇನಿದ್ದರೂ ಜೊತೆಯಾಗಿಯೇ’ ಪಾಂಬುವಿನ ಮುಖದಲ್ಲಿ ನಗು ಮೂಡಿತು.

‘ಯಾವ ವ್ಯವಹಾರ?’ ಕ್ರಾಸ್ ಪ್ರಶ್ನೆಗೆ ಪಾಂಬು ತತ್ತರಿಸಿದ.

‘ಮೀನಿನ ವ್ಯವಹಾರ’ ಬುದ್ಧಿವಂತನಂತೆ ಉತ್ತರಿಸಿದ.

‘ಪಾಂಬು, ನೀನು ಬಹಳ ಚಾಲಾಕಿನ ಮನುಷ್ಯ ಅನ್ನೋದು ನನಗೆ ಗೊತ್ತು. ನನ್ನನ್ನು ದಾರಿ ತಪ್ಪಿಸುವ ಮಾತು ಆಡುತ್ತಿರುವೆ? ಹೌದಲ್ಲವೆ?’ ಅಧಿಕಾರಿಯ ದನಿಯಲ್ಲಿ ಸಿಟ್ಟಿರುವುದನ್ನು ಗುರುತಿಸಿದ ಪಾಂಬು, ಕ್ಷಮಾಪಣೆ ಯಾಚಿಸುವಂತೆ ನಡು ಬಗ್ಗಿಸಿ ಕುಳಿತ.

‘ಇಲ್ಲ ಸಾ, ನೀವು ತಪ್ಪಾಗಿ ತಿಳ್ಕೊಳ್ಬೇಡಿ. ನನ್ನ ಮತ್ತು ಮುತ್ತುಚಾಂಡಿಯ ವ್ಯವಹಾರವಿರೋದು ಮೀನು ವ್ಯಾಪಾರದಲ್ಲಿಯಾದರೂ ನನಗೆ ಎದುರಾದ ಸಮಸ್ಯೆಗಳ ಬಗ್ಗೆ ನಾನು ಅವನ ಬಳಿ ಹೇಳಿಕೊಳ್ತೀನಿ. ಹಾಗೆ ಆ ವ್ಯಕ್ತಿಯ ವಿಷಯವನ್ನು ಅವನಿಗೆ ಹೇಳಿದ್ದೆ. ಒಂದು ದಿನ ಅವನನ್ನು ನಾನು ಸಿಟಿಗೆ ಬಿಡುವಾಗ ದಾಬಾಕ್ಕೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ಅವನನ್ನು ಪರಿಚಯಿಸಿದ್ದೆ. ಹಾಗೆ ಕಡಲ ಕಿನಾರೆಯಲ್ಲಿ ಅವನು ಒಂಟಿಯಾಗಿ ಅಲಿಯೋದನ್ನು ನೋಡಿದ್ದಾನೆ...’

ಅವನ ಮಾತು ಮುಂದುವರಿಯುವ ಮೊದಲೇ ಇನ್ಸ್‌ಪೆಕ್ಟರ್ ಮಧ್ಯೆ ಬಾಯಿ ಹಾಕಿದ.

‘ಅವನು ಕಾಣೆಯಾಗಿರೋ ವಿಷಯ ತಿಳಿಸ್ದೋನು ಮುತ್ತು ಚಾಂಡಿ ಅಂದೆ. ಈಗ ಮುತ್ತು ಚಾಂಡಿ ಅವನನ್ನು ಮರಳು ದಿಣ್ಣೆಯ ಮೇಲೆ ಓಡಾಡುತ್ತಿದ್ದುದ್ದನ್ನು ನೋಡಿದ್ದಾನೆ ಅಂತಿದ್ದೀಯಾ, ಪಾಂಬು, ನೀನು ಸತ್ಯ ಹೇಳಿದರೆ ಒಳ್ಳೆಯದು ಇಲ್ಲ, ಸತ್ಯ ಹೇಗೆ ಹೊರಡಿಸ್ಬೇಕೆನ್ನುವುದು ನನಗೆ ಚೆನ್ನಾಗಿ ಗೊತ್ತಿದೆ’ ಆತ್ಮೀಯತೆಯಿಂದಿದ್ದ ಇನ್ಸ್‌ಪೆಕ್ಟರ್ ನಿಂದ ಇಂತಹ ಮಾತುಗಳನ್ನು ಪಾಂಬು ನಿರೀಕ್ಷಿಸಿರಲಿಲ್ಲ. ಬೆದರಿಕೆಯ ನೋಟದಿಂದ ಅಧಿಕಾರಿಯನ್ನೇ ನೋಡಿದ.

‘ಪಾಂಬು, ನೀನು ಮತ್ತೇನೋ ನಮ್ಮ ಜೊತೆಗೆ ನಾಟ್ಕ ಮಾಡುತ್ತಿದ್ದೀಯಲ್ಲವೆ? ಸೀ, ಇದು ಕೊನೆಯ ವಾರ್ನಿಂಗ್. ನಮ್ಮೆದುರಿಗೆ ನಿನ್ನ ನಾಟಕ ನಡೆಯೋದಿಲ್ಲ’

‘ಇಲ್ಲ ಸಾರ್, ಸತ್ಯನೇ ಹೇಳ್ತಿದ್ದೀನಿ. ಅವ್ನು ಮಾಯವಾಗಿರೋದು ಸತ್ಯ’

ಪಾಂಬು ಮುಖದ ಮೇಲಿನ ಬೆವರನ್ನು ಒರೆಸಿಕೊಂಡ. ಅಧಿಕಾರಿ ಅವನತ್ತ ಸಂಶಯದ ನೋಟ ಬೀರಿದ.

* * *

ಇನ್ಸ್‌ಪೆಕ್ಟರ್ ರಾಜಧಾನಿಯ ತಲೆಯಲ್ಲಿ ಗುಣಾಕಾರ ಭಾಗಾಕಾರಗಳು ನಡೆದವು. ಎದುರಿಗೆ ಕುಳಿತಿದ್ದ ಪಾಂಬುವಿನ ಮೇಲೆ ಸಂದೇಹ ಬಲವಾಯಿತು. ಪಿಸಿ ಸಾರಂಗ ಹೇಳುವಂತೆ ಈತ ನಂಬಿಕೆಗೆ ಅರ್ಹನಾದವನಲ್ಲ. ಹಾಗಂತ ಖಡಾಖಂಡಿತವಾಗಿ ದೂರ ಮಾಡುವ ಹಾಗೂ ಇಲ್ಲ. ಕೆಲವೊಂದು ಸಂದರ್ಭದಲ್ಲಿ ಇಲಾಖೆಗೆ ಬಹಳಷ್ಟು ಸಹಾಯವನ್ನು ಮಾಡಿದ್ದಾನೆ. ಅವನು ನೀಡಿದ ಸಾಕ್ಷಿಗಳೆಲ್ಲಾ ಬಲವಾದ ಸಾಕ್ಷಿಗಳೇ. ಆದ್ದರಿಂದ ಅವನಿಂದ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳಬಹುದು. ಆ ಒಂದು ಕಾರಣಕ್ಕೆ ಅವನನ್ನು ಬಹಳಷ್ಟು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡಿರುವುದು. ಇಲಾಖೆಗೆ ಯಾವುದೂ ಕಷ್ಟವಲ್ಲ. ಪಾಂಬುವಿನಂತವರಿಂದ ಕೆಲಸಗಳು ಸುಸೂತ್ರವಾಗಿ ಮತ್ತು ಬಹಳ ಬೇಗನೇ ಇತ್ಯರ್ಥವಾಗುವುದರಿಂದ ಅವನನ್ನು ಆದರಿಸಬೇಕಾದ ಅನಿವಾರ್ಯತೆಯಿತ್ತು.

‘ಸರಿ ಪಾಂಬು, ನಿನ್ನ ಮಾತು ಒಪ್ಪಿಕೊಳ್ತೀನಿ. ನೀನು ನಮ್ಮ ಜೊತೆ ನಾಟಕವಾಡುತ್ತಿಲ್ಲಾಂತ ತಿಳ್ಕೊಳ್ತೀನಿ. ನಂಗೆ ಅನುಮಾನ ಕಾಡಿರೋದು ಬರೀ ಲಹರಿ ಕೇಸ್‌ನಲ್ಲಿ ಮಾತ್ರ ಯಾಕೆ ಹೀಗಾಗ್ತಿದೆ? ಈ ಹಿಂದೆ ನೀನು ಒದಗಿಸಿರೋ ಸಾಕ್ಷಿಗಳೆಲ್ಲಾ ಸರಿಯಾದ ದಾರಿಯಲ್ಲಿಯೇ ನಡೀತಿದ್ವು’ ಮಾತಿನಿಂದ ಅವನನ್ನು ಅಟ್ಟಕೇರಿಸಿದ ಅಧಿಕಾರಿ ಮಾತ್ರ ಗಂಭೀರ ಮುಖ ಹೊತ್ತು ಕೇಳಿದ.

‘ಈ ಸಾಕ್ಷಿನೂ ನಿಮಗೆ ಸರಿಯಾದ ಸಮಯದಲ್ಲಿಯೇ ದೊರಕುತ್ತೆ. ಆದ್ರೆ ಆ ಹುಡುಗನೇ ಒಂಥರಾ ವರ್ತಿಸ್ತಾನೆ. ಅವನ ಸುಳಿವು ಸಿಕ್ಕ ಕೂಡಲೇ ನಿಮಗೆ ಫೋನ್ ಮಾಡಿ ತಿಳಿಸ್ತೀನಿ. ಅವನನ್ನು ನೀವೇ ವಿಚಾರಿಸಬಹುದಲ್ಲವೆ?’

‘ಸರಿ, ನಿನ್ನ ಮೇಲೆ ಭರವಸೆಯಿದೆ’ ಹಣೆಯನ್ನು ನೀವಿಕೊಂಡು ಹೇಳಿದ. ಅಧಿಕಾರಿಗೆ ತನ್ನ ಮೇಲೆ ಸಿಟ್ಟು ಬಂದಿರುವುದನ್ನು ಬಲ್ಲ ಪಾಂಬು ಎದ್ದು ನಿಂತು ವಂದಿಸಿದ.

‘ಸಾರ್, ಕ್ಷಮಿಸಿ ನನ್ನ. ಇನ್ನು ಮುಂದೆ ಹೀಗೆ ಆಗದ ಹಾಗೆ ನಾನು ನೋಡ್ಕೊಳ್ತೀನಿ. ನಮ್ಮ ಸಹಾಯಕ್ಕೆ ಮುತ್ತು ಚಾಂಡಿ ಕೂಡ ಇದ್ದಾನೆ. ಆದ್ದರಿಂದ ಆ ಹುಡುಗ ಎಲ್ಲಿ ಹೋದರೂ ಅವನನ್ನು ಹುಡುಕಿಕೊಡೋ ಜವಾಬ್ದಾರಿ ನನ್ನದು’

ಇನ್ಸ್‌ಪೆಕ್ಟರ್ ಆ ಸಂದರ್ಭದಲ್ಲಿಯೂ ಪಾಂಬುವಿನ ಮಾತಿಗೆ ನಕ್ಕ.

‘ಪಾಂಬು, ಒಂದ್ಮಾತಂತು ನೆನಪಲ್ಲಿಟ್ಕೋ. ಇಲಾಖೆ ಸುಮ್ನೆ ನಿದ್ರಿಸುತ್ತಿಲ್ಲ. ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಿದೆ. ಆ ಹುಡುಗ ನಿಮ್ಮ ಕೈಗೆ ಸಿಗದಿದ್ದರೂ ನಮ್ಮ ಕೈಯಿಂದ ತಪ್ಪಿಸಿಕೊಳ್ಳೋದಿಕ್ಕೆ ಸಾಧ್ಯವಿಲ್ಲ’

ಗೆಲುವಿನ ಮಾತುಗಳನ್ನು ಕೇಳಿ ಪಾಂಬು ನಿರಾಶನಾದ.

‘ನಿಮ್ಮ ಇಲಾಖೆಯ ಜೊತೆಗೆ ನಾವೂನೂ ಕೈ ಜೋಡಿಸ್ತೀವಿ, ಸಾರ್. ನಮ್ಮ ಮೇಲೆ ನಂಬಿಕೆ ಇಟ್ಟಿರಿ. ಎರಡು ಬಾರಿ ಹೀಗಾಯ್ತೂಂತ ಇನ್ನು ಮುಂದೆ ಹೀಗಾಗೊಲ್ಲ. ದಯವಿಟ್ಟು ಅಪಾರ್ಥ ಮಾಡ್ಬೇಡಿ’ ಕೈ ಜೋಡಿಸಿ ಇನ್ಸ್‌ಪೆಕ್ಟರ್ ಗೆ ಹೇಳಿ ಹೊರಗೆ ಬಂದ. ಮುಖದಲ್ಲಿ ಮತ್ತೆ ಬೆವರಿಳಿಯಿತು. ಕರ್ಚೀಫ್ ಹೊರಗೆ ತೆಗೆದು ಮುಖ ಒರೆಸಿಕೊಂಡು ರಸ್ತೆಗಿಳಿದ.

ಎರಡು ಬಾರಿ ಇನ್ಸ್‌ಪೆಕ್ಟರನ್ನು ಏಮಾರಿಸಿಯಾಗಿದೆ. ಇನ್ನೊಮ್ಮೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಹಿತೇಶ ತನ್ನ ಮಾತು ಕೇಳುತ್ತಿದ್ದರೆ ಅಪಾಯದಿಂದ ಪಾರಾಗಬಲ್ಲ. ಇಲ್ಲವಾದಲ್ಲಿ ಅವನಿಗೆ ಶಿಕ್ಷೆ ತಪ್ಪಿದ್ದಲ್ಲ.

ಪಾಂಬು ಯೋಚಿಸುತ್ತಲೇ ರಸ್ತೆಯಂಚಿಗೆ ನಿಲ್ಲಿಸಿದ ತನ್ನ ಸ್ಯಾಂಟ್ರೋ ಕಾರನ್ನು ಹತ್ತಿ ಕುಳಿತು ಮುಂದಕ್ಕೋಡಿಸಿದ. ಕಾರು ನಿಧಾನವಾಗಿ ಚಲಿಸುತ್ತಲೇ ಅವನ ಹಿಂದೆಯೇ ಪೊಲೀಸ್ ಜೀಪು ಹಿಂಬಾಲಿಸಿತು. ಇದು ಪಾಂಬುವಿನ ಗಮನಕ್ಕೆ ಬರಲಿಲ್ಲ.

ಇನ್ಸ್‌ಪೆಕ್ಟರ್ ರಾಜಧಾನಿ ಜೀಪನ್ನು ನಿಧಾನವಾಗಿ ಓಡಿಸುತ್ತಾ ಪಾಂಬುವಿನ ಕಾರನ್ನು ಹಿಂಬಾಲಿಸುತ್ತಿದ್ದ. ಪಾಂಬುವಿನ ಕಾರು ಒಂದು ಹಳೇಯ ಕಟ್ಟಡದ ಮುಂದೆ ನಿಂತಿತು. ಜೀಪನ್ನು ಪಕ್ಕಕ್ಕೆ ನಿಲ್ಲಿಸಿ ಕೆಳಗಿಳಿದು ಅವನನ್ನು ಗಮನಿಸುತ್ತಲೇ ಸಣ್ಣ ಪೆಟ್ಟಿಗೆ ಅಂಗಡಿಯ ಬಳಿ ಕಾದ. ಪಾಂಬು ನೇರವಾಗಿ ಆ ಕಟ್ಟಡದೊಳಗೆ ಪ್ರವೇಶಿಸಿದ್ದು ಕಂಡಿತು. ಇನ್ಸ್‌ಪೆಕ್ಟರ್ ರಾಜಧಾನಿ ನಿಂತಲ್ಲಿಗೆ ಅದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಸ್ವಲ್ಪ ಹೊತ್ತಿನಲ್ಲಿಯೇ ಪಾಂಬು ಹೊರಗೆ ಬಂದ. ಅವನ ಹಿಂದೆಯೇ ಪಟ್ಟೆ ಪಟ್ಟೆಯ ಟೀ ಶರ್ಟ್ ಧರಿಸಿದ ವ್ಯಕ್ತಿ ಕೂಡ ಹೊರಗೆ ಬಂದ.

ಆರಡಿ ಎತ್ತರದ ಆಜಾನುಬಾಹು ವ್ಯಕ್ತಿ. ಹಿಂಭಾಗಕ್ಕೆ ಬಕ್ಕ ತಲೆ. ನಸುಗಪ್ಪು ಬಣ್ಣ. ಮೈಯಲ್ಲಿ ಬೊಜ್ಜು ಬೆಳೆದಂತೆ ಕಾಣುತ್ತಿದ್ದ ಅವನ ಮುಖದಲ್ಲಿ ಸೌಮ್ಯತೆಯ ಲಕ್ಷಣಗಳು ಕಾಣಿಸಲಿಲ್ಲ. ಸ್ವಲ್ಪ ಒರಟನ ಹಾಗೆ ಕಂಡ.

ರಾಜಧಾನಿ ಯೋಚಿಸಿದ. ಇವನನ್ನು ತಾನೆಲ್ಲೋ ನೋಡಿದ್ದೇನೆ, ಎಲ್ಲಿ? ನೆನಪುಗಳನ್ನು ಕೆದಕಿಕೊಂಡ. ನೆನಪಿನ ಶಕ್ತಿ ಅಗಾಧವಾಗಿತ್ತು. ತಲೆಕೊಡವಿಕೊಂಡು ಅತ್ತಲೇ ನೋಡಿದ.

ಹೌದು, ಸರಿಯಾದ ವ್ಯಕ್ತಿಯೇ. ಅವನನ್ನು ತಾನು ಕಂಡಿದ್ದೇನೆ. ಒಂದು ಮಳೆಗಾಲದ ಸಂಜೆ ಅವನ ಆಸರೆಯಲ್ಲಿ ನಿಂತದ್ದು. ಅಲ್ಲಿಯೂ ಪಾಂಬುವೇ ಸಹಾಯ ಮಾಡಿದ್ದು. ಹೆಸರು ತಕ್ಷಣವೇ ನೆನಪಿಗೆ ಬಂತು.

(ಸಶೇಷ)